# ತಾಯ್ತನದ ಹೊಳಪು ರಾಷ್ಟ್ರಪ್ರಶಸ್ತಿಯ ಚೆಂಬೆಳಕು

## ಶ್ರುತಿ ಹರಿಹರನ್ ಜೊತೆ ಮಾತುಕತೆ

■ ಸಂದರ್ಶನ: **ಪದ್ಮನಾಭ ಭಟ್**

◆ **ಅಮ್ಮನಾದ ಸಂಭ್ರಮದಲ್ಲಿರುವಾಗಲೇ ರಾಷ್ಟ್ರಪ್ರಶಸ್ತಿಯ ಖುಷಿಯೂ ನಿಮ್ಮನ್ನು ಅರಸಿಕೊಂಡು ಬಂದಿದೆ. ಸಂತಸಗಳ ಈ ಜುಗಲ್‌ಬಂದಿ ಹೇಗಿದೆ?**

ಪ್ರಶಸ್ತಿ ಬಂದಿರುವುದು ತುಂಬಾನೇ ಖುಷಿ ಕೊಟ್ಟಿದೆ. ಮುಂದೆಯೂ ಇಂಥದ್ದೇ ಒಳ್ಳೆಯ ಪಾತ್ರಗಳಲ್ಲಿ ನಟಿಸಬೇಕು, ಒಳ್ಳೆಯ ಸಿನಿಮಾಗಳ ಭಾಗವಾಗಬೇಕು ಎಂಬ ಆಸೆ ಹುಟ್ಟಿಸಿದೆ. ಇದು ನನ್ನ ನಟನಾ ಪ್ರಯಾಣದಲ್ಲಿನ ಮೈಲಿಗಲ್ಲು. 'ನಾತಿಚರಾಮಿ'ಯಂಥ ಸಿನಿಮಾ ಮಾಡಿ, ಅದು ಬಾಕ್ಸ್ ಆಫೀಸ್‌ನಲ್ಲಿ ಹೆಚ್ಚು ಗಳಿಕೆ ಮಾಡಿಲ್ಲದಿದ್ದರೂ, ಇಂಥ ಪ್ರಯತ್ನಗಳಿಗೆ ಯಾವುದಾದರೂ ರೂಪದಲ್ಲಿ ಫಲ ಸಿಕ್ಕೇ ಸಿಗುತ್ತದೆ ಎಂಬ ನಂಬಿಕೆಯನ್ನು ಈ ಪ್ರಶಸ್ತಿ ಹುಟ್ಟಿಸಿದೆ. ತಡವಾಗಿ ಸಿಕ್ಕಿದ್ದರೂ ಒಳ್ಳೆಯ ಫಲವೇ ಸಿಕ್ಕಿದೆ.

ಇನ್ನು ಮಗುವಿನ ವಿಷಯಕ್ಕೆ ಬಂದರಂತೂ ನನ್ನ ಜಗತ್ತೇ ಬದಲಾಗಿಹೋಗಿದೆ. ಈ ಜಗತ್ತನ್ನು ವರ್ಣಿಸಲಿಕ್ಕೆ ನನ್ನಲ್ಲಿ ಪದಗಳೇ ಇಲ್ಲ. ಕೆರಿಯರ್ ವಿಷಯದಲ್ಲಿ ಪ್ರಶಸ್ತಿ ಸಾಕಷ್ಟು ಖುಷಿಕೊಟ್ಟಿದೆ, ಉತ್ಸಾಹ ಹುಟ್ಟಿಸಿದೆ, ಎಲ್ಲ ಸರಿ. ಆದರೆ ನನ್ನ ಮಗು ನೀಡುತ್ತಿರುವ ಆನಂದದಕ್ಕೆ ಅದ್ಯಾವುದೂ ಸಮ ಅಲ್ಲವೇ ಅಲ್ಲ. ಈಗ ನನ್ನ ಎಲ್ಲ ಯೋಚನೆಗಳೂ ಅವಳ ಸುತ್ತಲೇ ಸುತ್ತಿಸುಳಿಯುತ್ತಿವೆ. ಇನ್ನು ಮುಂದೆ ನಾನು ತೆಗೆದುಕೊಳ್ಳುವ ಪ್ರತಿ ನಿರ್ಧಾರದ ಹಿಂದೆಯೂ ನನ್ನ ಮಗಳ ಮೇಲೆ ಈ ನಿರ್ಧಾರ ಹೇಗೆ ಪರಿಣಾಮ ಬೀರಬಹುದು ಎಂಬ ಯೋಚನೆ ಖಂಡಿತ ಇರುತ್ತದೆ.



ಹಾಗಾಗಿ ಈ ಪ್ರಶಸ್ತಿ, ಈಗಾಗಲೇ ನಾನು ಶುರುಮಾಡಿರುವ ಪ್ರಯಾಣದಲ್ಲಿ ಸಿಕ್ಕ ಉಡುಗೊರೆ. ಆದರೆ ಮಗು ಬಂದಿದ್ದು... ಅದು ಹೊಸದೇ ಒಂದು ಪ್ರಯಾಣ!

◆ **ಈಗೊಮ್ಮೆ ಹಿಂತಿರುಗಿ ನೋಡಿದರೆ 'ನಾತಿಚರಾಮಿ'ಯ 'ಗೌರಿ' ಪಾತ್ರದ ಜೊತೆಗಿನ ನಟನಾ ಸಂವಾದ ಹೇಗೆ ಕಾಣುತ್ತೆ?**

ನಾನು 'ಗೌರಿ'ಯಿಂದ ಮುಖ್ಯವಾಗಿ ಕಲಿತಿದ್ದು ಡಿಟ್ಯಾಚ್ಡ್ ಅಟ್ಯಾಚ್‌ಮೆಂಟ್ (ಹಚ್ಚಿಕೊಂಡೂ ಬಿಟ್ಟುಕೊಡುವುದು) ಅನ್ನೋ ವಿಷಯ. ನಾವು ನಮ್ಮ ಜೀವನದಲ್ಲಿ ಹಲವರ ಜೊತೆ ತುಂಬಾನೇ ಆಪ್ತರಾಗಿರ್ತೀವಿ. ಆದರೆ ಕೆಲವೊಮ್ಮೆ ಅವರು ನಮ್ಮನ್ನು ಬಿಟ್ಟು ಹೋದಾಗ ಮತ್ತೆ ಜೀವನವನ್ನು ಹೇಗೆ ನಡೆಸುವುದು, ಹೇಗೆ ಮುಂದೆ ಸಾಗುವುದು ಎಂದೇ ಗೊತ್ತಾಗುವುದಿಲ್ಲ. ಒಮ್ಮೆಲೇ ದಿಕ್ಕುತಪ್ಪಿದಂತಾಗುತ್ತದೆ. ಈ ದಿಕ್ಕೆಟ್ಟ ಪರಿಸ್ಥಿತಿಯಲ್ಲಿನ ಸೂಕ್ಷ್ಮಗಳು ನನಗೆ ಗೌರಿಯಲ್ಲಿ ಕಾಣಿಸಿದವು. ಈ ಸಿನಿಮಾದ ಹೆಸರು, 'ನಾತಿಚರಾಮಿ'. ಅಂದರೆ ನಿನ್ನನ್ನು ಎಂದಿಗೂ ಬಿಟ್ಟುಹೋಗುವುದಿಲ್ಲ ಎಂದು. ಆದರೆ ಇಡೀ ಸಿನಿಮಾ ಇರುವುದೇ ಬಿಟ್ಟುಕೊಡುವುದರ ಕುರಿತು. ಇದೇ ನನಗೆ ಗೌರಿ ಕಲಿಸಿಕೊಟ್ಟಿದ್ದು. ಪ್ರೀತಿ ಖಂಡಿತ ಬೇಕು. ಆದರೆ ಒಂದು ಬಗೆಯಲ್ಲಿ ಪ್ರೀತಿಸುತ್ತಲೇ ಬಿಟ್ಟುಕೊಡುವುದನ್ನೂ ಆ ಪಾತ್ರದಿಂದ ಕಲಿತಿದ್ದೇನೆ. ಯಾಕೆಂದರೆ ನಾವು ಪ್ರೀತಿಸುವ ವ್ಯಕ್ತಿಗಳು ನಮ್ಮನ್ನು ಬಿಟ್ಟು ಹೋದಾಗ, ಮತ್ತೆ ಬದುಕಿಗೆ ಮರಳಿ, ಜೀವನಯಾನವನ್ನು ಮುಂದುವರಿಸಬೇಕಲ್ಲವೇ...

◆ **'ಮೀ ಟೂ' ಅಭಿಯಾನದಲ್ಲಿ, ನಂತರ 'ನಾತಿಚರಾಮಿ' ಸಿನಿಮಾ ಬಿಡುಗಡೆಯ ಸಂದರ್ಭದಲ್ಲಿ ನೀವು ಮೀಡಿಯಾ ಮತ್ತು ಸೋಷಿಯಲ್ ಮೀಡಿಯಾ ಎರಡೂ ಕಡೆಯಿಂದ ಅಮಾನವೀಯ ಟ್ರೋಲ್ ದಾಳಿಯನ್ನು ಎದುರಿಸಬೇಕಾಯ್ತು. ಈಗ ಅದೇ ಸಿನಿಮಾಕ್ಕೆ ಮತ್ತು ನಿಮ್ಮ ಪಾತ್ರಕ್ಕೆ ಎರಡಕ್ಕೂ ಪ್ರಶಸ್ತಿ ಬಂದಿದೆ. ಇದನ್ನು ಹೇಗೆ ನೋಡುತ್ತೀರಿ?**

ನನಗೆ ಕಾಲ್ ಮಾಡಿದ ಹಲವರು, 'ಈ ಪ್ರಶಸ್ತಿ ನಿಮ್ಮ ವಿರುದ್ಧ ದಾಳಿ ನಡೆಸಿದವರಿಗೆ ನೀವು ನೀಡಿದ ಉತ್ತರ' ಎಂದೇ ಹೇಳುತ್ತಿದ್ದಾರೆ. ಆದರೆ ವೈಯಕ್ತಿಕವಾಗಿ ನನಗೆ ಹಾಗೇನೂ ಅನಿಸಿಲ್ಲ. ನನಗೆ ಅವರಿಗೆಲ್ಲ ಉತ್ತರ ಕೊಡಬೇಕು ಎನ್ನುವ ಆಸೆಯೂ ಇಲ್ಲ. ಯಾಕೆಂದರೆ ಅವರ ಅಭಿಪ್ರಾಯ ಅವರಿಗೆ;



**ನಟಿ ಶ್ರುತಿ ಹರಿಹರನ್‌ಗೆ ಸಂಭ್ರಮದ ಡಬಲ್ ಧಮಾಕ! ಹೆಣ್ಣುಮಗುವಿಗೆ ಜನ್ಮನೀಡಿದ ಖುಷಿ ಒಂದೆಡೆ. ತಾಯ್ತನದ ಪುಳಕದಲ್ಲಿ ಮೀಯುತ್ತಿರುವಾಗಲೇ 'ನಾತಿಚರಾಮಿ' ಸಿನಿಮಾದ ಅವರ ನಟನೆಗೆ ರಾಷ್ಟ್ರಪ್ರಶಸ್ತಿಯ ಗರಿ ದೊರಕಿರುವುದೂ ಸಂತಸದ ಉಬ್ಬರಕ್ಕೆ ಕಾರಣವಾಗಿದೆ. ವೃತ್ತಿ ಮತ್ತು ವೈಯಕ್ತಿಕ ಬದುಕಿನಲ್ಲಿ ಊಟೆಯೊಡೆದಿರುವ ಖುಷಿಯ ಬುಗ್ಗೆಯ ನಡುವೆಯೇ ಕಳೆದ ಕಹಿದಿನಗಳ ಕುರಿತೂ ಅವರು ಪ್ರಬುದ್ಧವಾಗಿ ಮಾತಾಡಿದ್ದಾರೆ.**